**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ-** ಶ್ರೀ ಹೆಚ್.ಎಸ್.ಕೆ ವಕೀಲರಿಂದ 1 ಮತ್ತು 4 ರಿಂದ 7 ನೇ ಪ್ರತಿವಾದಿಯ ಪರವಾಗಿ

11. ನಾನು ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹುಟ್ಟಿದಾಗಿನಿಂದ ಕವಾಡಿಗರಹಟ್ಟಿಯಲ್ಲಿ ವಾಸಿಸುತ್ತೇನೆ ಎಂದರೆ ಸರಿ. ನನ್ನ ಅಜ್ಜನ ಹೆಸರು ಕಟ್ಟೆಕರಿಯಪ್ಪ ಎಂದರೆ ಸರಿ. ಅವರ ಹೆಂಡತಿಯ ಹೆಸರು ಪಾಪಮ್ಮ ಎಂದರೆ ಸರಿ. ಅವರಿಬ್ಬರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರಿಬ್ಬರಿಗೆ ನನ್ನ ತಂದೆ ತಿಪ್ಪೇಸ್ವಾಮಿ, ನಿಂಗಪ್ಪ ಹಾಗೂ ಪಾಪಣ್ಣ ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿ ನನ್ನ ತಾಯಿ ಹೆಸರು ಸಣ್ಣಕ್ಕ. ಎರಡನೇ ಹೆಂಡತಿಯ ಹೆಸರು ಮಂಜಮ್ಮ. ಸಣ್ಣಕ್ಕ ಇವರಿಗೆ ನಾನೊಬ್ಬನೆ ಮಗ ಇರುತ್ತೇನೆ. ಮಂಜಮ್ಮ ಇವರಿಗೆ ನಾಲ್ಕು ಜನ ಮಕ್ಕಳಿರುತ್ತಾರೆ. ಅವರ ಹೆಸರು ಚಂದ್ರಮ್ಮ, ನಾಗೇಂದ್ರಪ್ಪ, ಸುಧಾಕರ ಹಾಗೂ ಜಗದೀಶ್ ಇರುತ್ತವೆ. ಇವರೆಲ್ಲರೂ ಜೀವಂತ ಇರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ ನಾನು ಸಣ್ಣಕ್ಕ, ಮಂಜಮ್ಮ ಹಾಗೂ ಮಂಜಮ್ಮನ ಮಕ್ಕಳನ್ನು ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಸರಿ.

12. ಕವಾಡಿಗರಹಟ್ಟಿಯಲ್ಲಿ ನನ್ನ ತಂದೆಗೆ ಸೇರಿದ ಮೂರು ಮನೆಗಳು ಇರುತ್ತವೆ. ಸದರಿ ಮನೆಗಳಲ್ಲಿ ನಾನು ಹಾಗೂ ಮಂಜಮ್ಮ ಮತ್ತು ಅವರ ಮಕ್ಕಳು ವಾಸಿಸುತ್ತೇವೆ ಎಂದರೆ ಸರಿ. ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಮನೆಗಳು ನಮ್ಮ ಹಾಗೂ ನಮ್ಮ ತಂದೆ ಹಾಗೂ ಮಂಜಮ್ಮನ ಮಕ್ಕಳ ಸ್ವಾಧೀನಲ್ಲಿರುತ್ತವೆ ಎಂದರೆ ಸರಿ.

13. ನನ್ನ ಅಜ್ಜ ಕಟ್ಟೆಕರಿಯಪ್ಪ ಅವರಿಗೆ ಚಳ್ಳಕೆರೆಯಲ್ಲಿ ಮೂರು ಎಕರೆ ಹಾಗೂ ಕವಾಡಿಗರಹಟ್ಟಿಯಲ್ಲಿ ಎರಡು ಮನೆಗಳು ಇದ್ದವು. ಇವುಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇದ್ದವು, ಅವುಗಳನ್ನು ನಿಂಗಪ್ಪ ಹಾಗೂ ತಿಪ್ಪೇಸ್ವಾಮಿ ಮಾರಾಟ ಮಾಡಿರುತ್ತಾರೆ. ಮಾರಾಟ ಮಾಡಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಎಂ.ಕೆ.ಹಟ್ಟಿ ಗ್ರಾಮದಲ್ಲಿರುವ ಸರ್ವೆ.ನಂ.100(ಎ) ಮತ್ತು (ಬಿ) ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ. ಅವುಗಳನ್ನು ಮಾರಾಟ ಮಾಡಿರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಮುರುಘರಾಜ ಮಠಕ್ಕೆ ಮಾರಾಟ ಮಾಡಲಾಗಿದೆ ಅದಕ್ಕೆ ಅದರ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ. ಮುರುಘರಾಜ ಮಠವನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ.

14. ಸರ್ವೆ.ನಂ.46/ಪಿ4 ಮೂರು ಎಕರೆ ಆಸ್ತಿ ಗೊರ್ಲಕಟ್ಟೆ ಗ್ರಾಮದಲ್ಲಿ ಇತ್ತು ಎಂದರೆ ಸರಿ. ಅದೇ ರೀತಿ ಮಲ್ಲನಕಟ್ಟೆ ಗ್ರಾಮದಲ್ಲಿ ಸರ್ವೆ.ನಂ.36/2 ರಲ್ಲಿ ಎರಡು ಎಕರೆ 20 ಗುಂಟೆ ಜಮೀನು ಇತ್ತು ಎಂದರೆ ಸರಿ. ಮಠದಕುರುಬರಹಟ್ಟಿ ಗ್ರಾಮದಲ್ಲಿ ಸರ್ವೆ ನಂ.100/1 ಪಿ1 ರಲ್ಲಿ

ಎರಡು ಎಕರೆ 31 ಗುಂಟೆ ಜಮೀನು ಇತ್ತು ಎಂದರೆ ಸರಿ. ಸರ್ವೆ ನಂ.100/1 ಪಿ2 ರಲ್ಲಿ ಎರಡು ಎಕರೆ 32 ಗುಂಟೆ ಜಮೀನು ಇತ್ತು ಎಂದರೆ ಸರಿ. ಈ ಎಲ್ಲಾ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಈ ಎಲ್ಲಾ ಸ್ವತ್ತುಗಳು 2007-08 ರಲ್ಲಿ ಮಾರಾಟ ಮಾಡಿರುವುದರಿಂದ ಸೇರಿಸಿರುವುದಿಲ್ಲ. ಖರೀದಿ ಮಾಡಿರುವವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ.

15. ದಿನಾಂಕ 13.08.2007 ರಂದು 1 ರಿಂದ 3 ನೇ ಪ್ರತಿವಾದಿಯವರು ತಮಗೆ ಸೇರಿದ ಸ್ವತ್ತುಗಳನ್ನು ನೋಂದಣಿ ಪಾಲು ವಿಭಾಗ ಪತ್ರದ ಮೂಲಕ ಹಂಚಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಪಾಲು ವಿಭಾಗದಲ್ಲಿ ಗೊರ್ಲಕಟ್ಟೆ ಗ್ರಾಮದ ಮೂರು ಎಕರೆ ಜಮೀನು 3 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. 2007 ರಲ್ಲಿ ನನಗೆ ಸದರಿ ಪಾಲು ವಿಭಾಗದ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಾಲು ವಿಭಾಗ ಪತ್ರವನ್ನು 2020 ರಲ್ಲಿ ನಾನು ನೋಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ 2020 ರಲ್ಲಿ ಗೊತ್ತಾಗಿರುತ್ತದೆ.

16. ದಿನಾಂಕ 20.07.2020 ರಂದು ನನ್ನ ತಂದೆ ಹಾಗೂ 1 ನೇ ಪ್ರತಿವಾದಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ಮಲ್ಲನಕಟ್ಟೆ ಗ್ರಾಮದ ಸರ್ವೆ ನಂ.36/3 ಖಾತೆ ನಂ.121 ಎರಡು ಎಕರೆ 20 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಹಾಗೂ ಮಠದಕುರುಬರಹಟ್ಟಿ ಗ್ರಾಮದ ಸರ್ವೆ ನಂ.100/1 ಪಿ1 ಎರಡು ಎಕರೆ 31 ಗುಂಟೆ ನನ್ನ ತಂದೆ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ದಿನಾಂಕ 18.09.2007 ರಂದು ನನ್ನ ತಂದೆಗೆ ಬಂದ ಹಿಸ್ಸೆಯನ್ನು ನಾನು ಹಾಗೂ ನನ್ನ ತಂದೆ ಮತ್ತು ಮಂಜಮ್ಮನ ಮಕ್ಕಳು ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾ ಸ್ವಾಮಿಗಳಿಗೆ ಶುದ್ಧ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ದಿನಾಂಕ 18.09.2007 ರಂದು ಮಠದಕುರುಬರಹಟ್ಟಿ ಗ್ರಾಮದ ಸರ್ವೆ ನಂ.100/1 ಪಿ2 ಎರಡು ಎಕರೆ 32 ಗುಂಟೆ ಜಮೀನನ್ನು 3 ನೇ ಪ್ರತಿವಾದಿ ಹಾಗೂ ಆತನ ಮಗ ಅಶೋಕ್ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾ ಸ್ವಾಮಿಗಳಿಗೆ ಶುದ್ಧ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

17. ಮಂಜಮ್ಮ ಹಾಗೂ ಆಕೆಯ ಕುಟುಂಬಕ್ಕೆ ಸೇರಿರುವ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ದಿನಾಂಕ 13.08.2007 ಹಾಗೂ 20.07.2020 ರ ಪಾಲುವಿಭಾಗ ಪತ್ರಗಳನ್ನು ನಾನು ಇಲ್ಲಿಯವರೆಗೂ ಯಾವುದೇ ನ್ಯಾಯಾಲಯದಲ್ಲಿ

ಪ್ರಶ್ನಿಸಿರುವುದಿಲ್ಲ. ಈ ದಾವೆಯಲ್ಲಿಯು ಸಹ ನಾನು ಸದರಿ ಪಾಲು ವಿಭಾಗಗಳನ್ನು ನಾನು ಪ್ರಶ್ನಿಸಿರುವುದಿಲ್ಲ. ಮಾರಾಟವಾದ ಆಸ್ತಿಗಳ ಬಗ್ಗೆ ಕೂಡ ಈ ದಾವೆಯಲ್ಲಿ ಪ್ರಶ್ನಿಸಿರುವುದಿಲ್ಲ.

18. ದಿನಾಂಕ 26.11.2008 ರಂದು ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾ ಸ್ವಾಮಿಗಳು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ತಮಗೆ ಸೇರಿದ ಸರ್ವೆ ನಂ.36/2 ಹಾಗೂ 50/1 ಎ ಜಮೀನುಗಳನ್ನು ಅದಲಿಬದಲಿ ನೋಂದಣಿ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ನೋಂದಣಿ ಪತ್ರದಂತೆ 1 ಮತ್ತು 2 ನೇ ಪ್ರತಿವಾದಿಗಳಿಗೆ ಚಿತ್ರದುರ್ಗ ತಾಲೂಕಿನ ಮಲ್ಲನಕಟ್ಟೆ ತಾಲೂಕಿನ ಸರ್ವೆ ನಂ.36/2 ರಲ್ಲಿ ಎರಡು ಎಕರೆ 20 ಗುಂಟೆ ಹಾಗೂ ಮಠದಕುರುಬರಹಟ್ಟಿ ಗ್ರಾಮದಲ್ಲಿ ಸರ್ವೆ ನಂ.50/1 ರಲ್ಲಿ ಎರಡು ಎಕರೆ ಜಮೀನು ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾ ಸ್ವಾಮಿಗಳಿಗೆ ಬಂದಿರುತ್ತದೆ ಎಂದರೆ ಸರಿ. ದಿನಾಂಕ 26.11.2008 ರಲ್ಲಿ ಸದರಿ ಅದಲಿಬದಲಿ ಪತ್ರದ ಪ್ರಕಾರ 2 ಮತ್ತು 3 ನೇ ಪ್ರತಿವಾದಿಗಳು ಮೌಖಿಕ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ದಿನಾಂಕ 30.01.1985 ರಂದು ಕ್ರಯಕ್ಕೆ ಪಡೆದ ಸ್ವತ್ತುಗಳನ್ನು 1 ರಿಂದ 3 ನೇ ಪ್ರತಿವಾದಿಗಳು ಮೌಖಿಕ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಸರ್ವೆ ನಂ.100/1 ಪಿ1 ರಲ್ಲಿ ಎರಡು ಎಕರೆ 31 ಗುಂಟೆ ಜಮೀನು ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತನ್ನು ನಾನು, ನನ್ನ ತಂದೆ ಹಾಗೂ ಮಂಜಮ್ಮನ ಮಕ್ಕಳು ದಿನಾಂಕ 18.09.2007 ರಂದು ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾ ಸ್ವಾಮಿಗಳಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ.100/1 ಪಿ2 ರಲ್ಲಿ ಎರಡು ಎಕರೆ 32 ಗುಂಟೆ ಜಮೀನು 3 ನೇ ಪ್ರತಿವಾದಿ ಹಿಸ್ಸೆಗೆ ಬಂದಿದ್ದು, ಅದನ್ನು 3 ನೇ ಪ್ರತಿವಾದಿ ಹಾಗೂ ಆತನ ಮಗ ಅಶೋಕ್ 18.09.2007 ರಂದು ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾ ಸ್ವಾಮಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

19. ದಿನಾಂಕ 26.11.2008 ರ ನೋಂದಣಿ ಅದಲಿಬದಲಿ ಪತ್ರದ ಪ್ರಕಾರ 1 ಮತ್ತು 2 ನೇ ಪ್ರತಿವಾದಿಗಳಿಗೆ ಮಲ್ಲನಕಟ್ಟೆ ಗ್ರಾಮದ ಸರ್ವೆ ನಂ.36/2 ರ ಎರಡು ಎಕರೆ 20 ಗುಂಟೆ ಜಮೀನು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಆದರೆ ರೆವಿನ್ಯೂ ದಾಖಲೆಯಲ್ಲಿ ತಪ್ಪಾಗಿ 2 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಅದನ್ನು ದುರುಪಯೋಗಪಡಿಸಿಕೊಂಡು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನೋಂದಣಿ ಪಾಲು ವಿಭಾಗದಂತೆ ಅವರವರ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ದಾವ ಸ್ವತ್ತು 1 ಮತ್ತು 2 ನೇ ಪ್ರತಿವಾದಿಗಳ

ಹೆಸರಿನಲ್ಲಿ ಇರುತ್ತವೆ. ಸರ್ವೆ 100/1 ಪಿ1 ಹಾಗೂ 100/1 ಪಿ2 ಸ್ವತ್ತುಗಳು ದಾವೆ ಹಾಕುವಾಗ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾ ಸ್ವಾಮಿಗಳ ಹೆಸರಿನಲ್ಲಿ ಇರುತ್ತವೆ ಹಾಗೂ ಸರ್ವೆ ನಂ.46/ಪಿ4 3 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ.36/2 ಖಾತೆ ನಂ.121 ಸ್ವತ್ತು 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ.

20. ದಾವ ಸ್ವತ್ತನ್ನು 1 ಮತ್ತು 2 ನೇ ಪ್ರತಿವಾದಿಗಳು ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆ. ದಾವ ಸ್ವತ್ತು ದಿನಾಂಕ 20.07.2020 ರ ಪಾಲು ವಿಭಾಗದಂತೆ 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ.

**ಪ್ರತಿವಾದಿಯರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ